**ದಿನಾಂಕಃ 04.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀ.ಎಸ್. ಎಸ್ ಪಿ ವಕೀಲರಿಂದಃ**

ಸದರಿ ಪ್ರಕರಣದಲ್ಲಿ ನಾನು 1 ನೇ ಅರ್ಜಿದಾರಳಾಗಿದ್ದು ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

| | | |
|---|---|---|
| ನಿ.ಪಿ-1 | : | ಮದುವೆ ಆಮಂತ್ರಣ ಪ್ರತಿಕೆ, |
| ನಿ.ಪಿ-2 ರಿಂದ 4 | : | ನನ್ನ ಹಾಗೂ 3 ಮತ್ತು 4 ನೇ ಅರ್ಜಿದಾರರ ಆಧಾರ ಕಾರ್ಡನ ನೋಟರಿ ಪ್ರತಿ |

ಎಂದು ಗುರುತಿಸಲಾಯಿತು.

ಕಾರಣ ಅರ್ಜಿಯಲ್ಲಿ ಕೋರಿ ಕೊಂಡದಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಬಿ ಕೆ ವಕೀಲರಿಂದಃ**

ಎದುರುದಾರ ಹಾಗೂ ಅವರ ಪರ ವಕೀಲರನ್ನು ಕೂಗಿಸಿ ಕರೆಯಲಾಯಿತು ಯಾರು ಹಾಜರಿರಲಿಲ್ಲ ಹೀಗಾಗಿ ಎದುರುದಾರರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದು ಕೊಳ್ಳಲಾಯಿತು.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.